ಕೊಟ್ಟು ಕೆಲಸವನ್ನು ಪೂರ್ಣ ಮಾಡಲು K.R.D.C.L. ನವರಿಗೆ ಸೂಚನೆ ಕೊಟ್ಟಿದ್ದೇವೆ. ಉಳಿದ 20% ಕೆಲಸವನ್ನು ಮಾಡಿಕೊಂಡುತ್ತೇವೆ.

5. ವಿಷಯ: ಬೆಂಗಳೂರಿನ ಸದಾಶಿವನಗರದ 16ನೇ ಅಡ್ಡರಸ್ತೆಯಲ್ಲಿರುವ ಬೃಂದವನ ದೇವಸ್ಥಾನಕ್ಕೆ ಭಕ್ತಾದಿಗಳ ಪ್ರವೇಶವನ್ನು ನಿರ್ಬಂಧಿಸಿರುವ ಹಾಗೂ ಸದರಿ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

ಅಧ್ಯಕ್ಷರು: ಮುನಿರತ್ನರವರೆ, ನಿಮ್ಮ ಸೂಚನೆಗೆ ಉತ್ತರ ಬಂದಿಲ್ಲ, ಸೋಮವಾರ ಉತ್ತರ ತರಿಸಿ ಕೊಡುತ್ತೇನೆ.

6. ವಿಷಯ: ರಾಷ್ಟ್ರೀಯ ಹೆದ್ದಾರಿ–75 ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸಲು ಮಂಜೂರಾಗಿದ್ದು ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ–75 ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿ ವರ್ತಿಸಲು ದೇವಿಹಳ್ಳಿಯಿಂದ ಸಕಲೇಶಪುರ ಮಾರ್ಗ, ಬಿ. ಸಿ. ರೋಡ್ ರಸ್ತೆವರೆಗೆ ಪ್ರಸ್ತಾಪವಿದ್ದು ಮತ್ತು ಸಕಲೇಶಪುರ ಪಟ್ಟಣ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆ ಮಂಜೂರಾಗಿದ್ದು ಕಾಮಗಾರಿ ವಿಳಂಬವಾಗಿ ಸಂಚಾರಕ್ಕೆ ತೊಂದರೆ ಆಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು): ರಾಷ್ಟ್ರೀಯ ಹೆದ್ದಾರಿ 75 (ಹಳೇ ಸಂಖ್ಯೆ–48) ನೆಲಮಂಗಲ – ಮಂಗಳೂರು ಭಾಗ: ರಾಷ್ಟ್ರೀಯ ಹೆದ್ದಾರಿ–48 ಕಿ.ಮೀ. 27.30 (ನೆಲಮಂಗಲ) ರಿಂದ ಕಿ.ಮೀ. 347.80 (ಮಂಗಳೂರು) ಒಟ್ಟು 320.00 ಕಿಮೀ. ಇರುತ್ತದೆ ಈ ರಸ್ತೆ ಹಾಸನ–ಸಕಲೇಶಪುರ–ಉಪ್ಪಿನಂಗಡಿ ಮಾರ್ಗ ವಾಗಿ ಹಾದು ಹೋಗುತ್ತದೆ. ಕಿ.ಮೀ. 28.30 ರಿಂದ 110.00ರವರೆಗೆ ನಾಲ್ಕು ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯು ಭಾರತೀಯ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಕಿ.ಮೀ. 110.00 (ದೇವಿಹಳ್ಳಿ) ರಿಂದ ಕಿ.ಮೀ. 189.50 ರವರೆಗೆ ಈಗಾಗಲೇ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ದಿನಾಂಕ: 12.08.2011ರಂದು ಹಸ್ತಾಂತರಿಸಲಾಗಿದೆ. ಸದರಿ ಭಾಗವನ್ನು ಚತುಷ್ಪತ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿ ಸಹ ಪೂರ್ಣಗೊಳಿಸಲಾಗಿದೆ.

ಹಾಸನ ಜಿಲ್ಲೆ, ಸಕಲೇಶಪುರ ಪಟ್ಟಣದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–48ರಸ್ತೆಯು ಹಾಯ್ದು ಹೋಗಿದ್ದು ಅದರ ಸರಪಳಿಯು ಕಿ.ಮೀ. 222.00 ರಲ್ಲಿ ಪ್ರಾರಂಭವಾಗಿ ಕಿ.ಮೀ. 225.60 ವರೆಗೆ ಇದ್ದು, ಇದರ ಒಟ್ಟು ಉದ್ಧ 3.60 ಕಿ.ಮೀ. ಇರುತ್ತದೆ. ಈ ಭಾಗದ ರಸ್ತೆಯು 7.00 ರಿಂದ 12.00 ಮೀ. ಅಗಲದ ಡಾಂಬರೀಕರಣ ಮೇಲ್ಮೈ ಹೊಂದಿರುತ್ತದೆ.

ಸಕಲೇಶಪುರ ಪಟ್ಟಣದ ವ್ಯಾಪ್ತಿಯಲ್ಲಿರುವ ದಟ್ಟವಾದ ವಾಹನ ಸಂಚಾರವನ್ನು ತಪ್ಪಿಸಲು ಸಕಲೇಶಪುರಕ್ಕೆ ಹೊರ ವಲಯ ರಸ್ತೆಯನ್ನು ಅಂದರೆ ಕಿ.ಮೀ. 221.00 ರಿಂದ ಕಿಮೀ. 225.00 ರವರೆಗೆ ಹೇಮಾವತಿ ನದಿಗೆ ಹೊಸದಾಗಿ ಬೃಹತ್ ಸೇತುವೆ ಸೇರಿದಂತೆ ನಿರ್ಮಿಸಲು ಉದ್ದೇಶಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ` 48.00 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿತ್ತು.

ಆದರೆ, ಕೇಂದ್ರ ಭೂಸಾರಿಗೆ ಮಂತ್ರಾಲಯದವರ ಪತ್ರ ಸಂಖ್ಯೆ RW/12014/56/*2010-KNT Dtd: 6th April, 2011 ರಲ್ಲಿ ರಾಷ್ಟ್ರೀಯ ಹೆದ್ದಾರಿ–48ರ ಹಾಸನದಿಂದ ಬಿ. ಸಿ. ರಸ್ತೆಯವರೆಗಿನ ರಸ್ತೆಯನ್ನು ಭಾರ ತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು NHDP-IVB ಅಡಿಯಲ್ಲಿ ಅಭಿವೃದ್ಧಿ ಗೊಳಿಸಲು ಈಗಾಗಲೇ ಯೋಜಿಸಲಾಗಿದ್ದು, ಸಕಲೇಶಪುರ ಪಟ್ಟಣಕ್ಕೆ ಹೊರ ವಲಯ ರಸ್ತೆಯನ್ನು ಸಹ ಸದರಿ ಯೋಜನೆ ಅಡಿಯಲ್ಲಿ ಒಳಗೊಂಡಿರು ವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರು, ಇವರು ಮೇಲಿನ ಉಲ್ಲೇಖದಡಿ ಸಲ್ಲಿಸ

ಲಾಗಿದ್ದ ಸಕಲೇಶಪುರ ಹೊರವಲಯ ರಸ್ತೆ ನಿರ್ಮಾಣದ ಪ್ರಸ್ತಾವನೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದ ಮಂಜೂರಾತಿ ದೊರೆತಿರುವುದಿಲ್ಲ.

National Highway Authority of India, New Delhi ಇವರ ವತಿಯಿಂದ ಹಾನದಿಂದ ಬಂಟ್ವಾಳ ಕ್ರಾಸ್ ಕಿ.ಮೀ. 189.50 ರಿಂದ 328.00 ಕಿ.ಮೀ. ವರೆಗಿನ ಉದ್ದದ ರಸ್ತೆಯ ಭಾಗವನ್ನು ಸಕಲೇಶಪುರ ಹೊರವಲಯ ರಸ್ತೆ ಸೇರಿಸಿ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು NHDP-IV ರ ಅಡಿಯಲ್ಲಿ ಕರ್ನಾಟಕ ಸರ್ಕಾರ, ಲೋಕೋಪಯೋಗಿ ಇಲಾಖೆ ಹಾಗೂ ಸಮಾಲೋಚಕರೊಂದಿಗೆ DPR ತಯಾರಿಸಲು Tripartite Agreement ದಿನಾಂಕ: 06.06.2012 ರಂದು ಮಾಡಿಕೊಂಡಿದ್ದು, ಈ ಕುರಿತಾಗಿ ಒಂದು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿದ್ದು, (PPP_DBFOT ಮಾದರಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು) Public Private Participation Appraisal Committee (PPPAC) ಇವರ ಅನುಮೋದನೆಗಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೇಂದ್ರ ಭೂಸಾರಿಗೆ ಸಚಿವಾಲಯಲಕ್ಕೆ ಸಲ್ಲಿಸಿರುತ್ತಾರೆ. ಇದರಲ್ಲಿ ಸಕಲೇಶಪುರ bypass ಕಾಮಗಾರಿ ಸಹ ಒಳಗೊಂಡಿರುತ್ತದೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ: Bypass ರಸ್ತೆ ಮಾಡುವುದಕ್ಕೆ 1991ರಲ್ಲೇ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆ. ಈಗಾಗಲೇ 24 ವರ್ಷವಾಗಿದೆ. ಅವರೆಲ್ಲ ದುಡ್ಡು ತೆಗೆದುಕೊಂಡಿದ್ದಾರೆ. ಅಲ್ಲಿ ಪ್ರತಿವಾರ 2–3 oil tanker ಗಳು ಬೀಳುತ್ತಿರುತ್ತವೆ. ಆದ್ದರಿಂದ, ದಯಮಾಡಿ ಬೇಗ ಮಾಡಿಕೊಡಬೇಕು. ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಚರ್ಚೆ ಬೇಡ.

ಡಾ: ಹೆಚ್. ಸಿ. ಮಹದೇವಪ್ಪ: ಇದನ್ನು ಅಪ್ರೂವ್ ಮಾಡಿಕೊಡಿ ಎಂದು Surface Transport Ministry, Government of India ಗೆ ಕಳುಹಿಸಿದ್ದೇವೆ. ಅವರಿಂದ ಅಪ್ರೂವ್ ಆದ ತಕ್ಷಣವೇ bypass ರಸ್ತೆ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಬೇಗ ಮಾಡಿಕೊಡಿ.

Dr. H. C. Mahadevappa: Already proposal has been submitted to the Surface Transport Ministry, Union Government.

6. ವಿಷಯ: ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಹದಿಹರೆಯದ ಹೆಣ್ಣುಮಕ್ಕಳ ನಾಪತ್ತೆ ಪ್ರಕರಣಗಳು ಹೆಚ್ಚಾಗಿರುವ ಬಗ್ಗೆ.

(ಮಾನ್ಯ ಸದಸ್ಯರಾದ ಶ್ರೀಮತಿ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆರವರು ಹಾಜರಿರಲಿಲ್ಲ)

7. ವಿಷಯ: ಕೇಂದ್ರ ಸರ್ಕಾರದ ನಿರ್ಮಲ ಭಾರತ ಅಭಿಯಾನ ಯೋಜನೆಯಡಿಯಲ್ಲಿ ಕಟ್ಟಿರುವಂಥ ಶೌಚಾಲಯಗಳಿಗೆ ಮೊದಲನೇ ಕಂತಿನ ಹಣವನ್ನು ನೀಡಿದ್ದು, ಎರಡನೇ ಕಂತಿನ ಹಣವನ್ನು ಕೊಡದಿರುವ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ನಿರ್ಮಲ ಭಾರತ ಅಭಿಯಾನ ಯೋಜನೆಯಡಿಯಲ್ಲಿ ಕಟ್ಟಿರುವಂಥ ಶೌಚಾಲಯಗಳಿಗೆ ಮೊದಲನೇ ಕಂತಿನ ಹಣವನ್ನು ನೀಡಿದ್ದು, ಎರಡನೇ ಕಂತಿನ ಹಣವನ್ನು ಕೊಡದಿರುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಾನಂದ ಎಸ್. ಪಾಟೀಲ್ ನಿಯಮ 73ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ ಸಮಖ್ಯೆ 109ರ ಮೇಲಿನ ಹೇಳಿಕೆ.

ಶ್ರೀ ಹೆಚ್. ಸಿ. ಮಹದೇವ ಪ್ರಸಾದ್ (ಸಹಕಾರಿ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ,